ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,
ನಂ.1/14, ದಕ್ಷಿಣ ವಿಂಗ್ ನೆಲಮಹಡಿ, ಸಿಲ್ವರ್ ಜ್ಯೂಬ್ಲಿ ಬ್ಲಾಕ್ ಪಾರ್ಟ್ ಆಫ್ ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು-560027
ದೂರವಾಣಿ: 080-22240445/6 Email: ksskcb@gmail.com

ಸಂಖ್ಯೆ: ಕರಾಸಕಆ/ಮಾಹಅ/ಸಿಆರ್-30/2019-20/546 ದಿನಾಂಕ: 10.01.2020

Register Post

ಸಿದ್ಧಾರ್ಥ ಜೋಷಿ,
#339, 7ನೇ ಮುಖ್ಯರಸ್ತೆ,
3ನೇ ಅಡ್ಡರಸ್ತೆ, ವಿವೇಕನಗರ,
ಬೆಂಗಳೂರು-560047.

ಮಾನ್ಯರೆ,

ವಿಷಯ: ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿರುವ ಮಾಹಿತಿಯನ್ನು ಒದಗಿಸುವ ಬಗ್ಗೆ.

ಉಲ್ಲೇಖ: **ಸಿದ್ಧಾರ್ಥ ಜೋಷಿ** ರವರ ಮಾಹಿತಿ ಹಕ್ಕು ಅರ್ಜಿ ದಿ: 01.01.2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮಾಹಿತಿ ಹಕ್ಕು ಅರ್ಜಿಯಲ್ಲಿ ತಾವು ದಿನಾಂಕ: 12.07.2018 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಖಾಸಗಿ ನಿರ್ಮಲೀಕರಣ ಸ್ವಚ್ಛತಾ ಕೆಲಸಗಾರರಿಗೆ ತರಬೇತಿ ನೀಡುವ ಸಂಬಂಧ ನಡೆದ ಸಭೆಯ ನಡವಳಿ ಪ್ರತಿಯನ್ನು ಕೋರಿರುತ್ತೀರಿ, ಆದರೆ ಸದರಿ ಸಭೆಯು ದಿ:12.07.2019 ರಂದು ನಡೆದಿದ್ದು, ನಡವಳಿ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ನಂಬುಗೆಯ,

ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ
ಸಂಶೋಧನಾಧಿಕಾರಿಗಳು.

**ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ, ದಿನಾಂಕ: 12-07-2019 ರಂದು ಮಧ್ಯಾಹ್ನ 3.00 ಗಂಟೆಗೆ ನಿರ್ಮಲೀಕರಣ ಸ್ವಚ್ಛತಾಗಾರರಿಗೆ ತರಬೇತಿ ನೀಡುವ ಸಂಬಂಧ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಸಮಾಜ ಕಲ್ಯಾಣ ಇಲಾಖಾ ಮುಖ್ಯಸ್ಥರೊಂದಿಗೆ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ತುಷಾರ್ ಗಿರಿನಾಥ್, ಭಾ.ಆ.ಸೇ. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ.
2. ಡಾ. ಇ. ವೆಂಕಟಯ್ಯ, ಭಾ.ಆ.ಸೇ. (ನಿವೃತ್ತ), ಸಲಹೆಗಾರರು, ಎಸ್.ಸಿ.ಎಸ್.ಪಿ & ಟಿ.ಎಸ್.ಪಿ ನೋಡಲ್ ಏಜೆನ್ಸಿ, ಸಮಾಜ ಕಲ್ಯಾಣ ಇಲಾಖೆ.
3. ಡಾ. ಹೆಚ್. ನಟರಾಜು, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ.

ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಹಾಜರಿದ್ದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

**ಬೆಂಗಳೂರು ನಗರದಲ್ಲಿ ಖಾಸಗಿ ಎಸ್.ಟಿ.ಪಿ ಪ್ಲಾಂಟ್/ ಖಾಸಗಿ ಮಾಲೀಕರು ಹೊಂದಿರುವ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಮೆಷಿನ್‌ಗಳ ಮೂಲಕ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವ/ತೆರೆದ ಚರಂಡಿ/ಗಟಾರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಿರ್ಮಲೀಕರಣ ಸ್ವಚ್ಛತಾ ಕೆಲಸಗಾರರಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಯಂತ್ರಾಧಾರಿತ ನಿರ್ಮಲೀಕರಣ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ತರಬೇತಿ ನೀಡಲು ಪತ್ರಿಕಾ ಪ್ರಕಟಣೆಯ ಮೂಲಕ ಅರ್ಜಿ ಆಹ್ವಾನಿಸಿರುವ ಬಗ್ಗೆ.**

ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ರವರು ಬೆಂಗಳೂರು ನಗರದಲ್ಲಿ ಖಾಸಗಿ ಎಸ್.ಟಿ.ಪಿ ಪ್ಲಾಂಟ್/ ಖಾಸಗಿ ಮಾಲೀಕರು ಹೊಂದಿರುವ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಮೆಷಿನ್‌ಗಳ ಮೂಲಕ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವ/ತೆರೆದ ಚರಂಡಿ/ಗಟಾರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಿರ್ಮಲೀಕರಣ ಸ್ವಚ್ಛತಾ ಕೆಲಸಗಾರರಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಯಂತ್ರಾಧಾರಿತ ನಿರ್ಮಲೀಕರಣ ಕೆಲಸ ನಿರ್ವಹಣಾ ತರಬೇತಿಗೆ ನೋಂದಾಯಿಸಲು ದಿನಾಂಕ: 06-07-2019 ರಂದು ಪತ್ರಿಕಾ ಪ್ರಕಟಣೆಯ ಮೂಲಕ ಅರ್ಜಿ ಆಹ್ವಾನಿಸಿರುವ ವಿಜಯವಾಣಿ ಮತ್ತು ಪ್ರಜಾವಾಣಿ ಪತ್ರಿಕೆಯ ಪ್ರತಿಗಳನ್ನು ಸಭಾಧ್ಯಕ್ಷರ ಗಮನಕ್ಕೆ ತಂದರು.

ಸಭಾಧ್ಯಕ್ಷರು, ಪೌರಾಡಳಿತ ನಿರ್ದೇಶನಾಲಯ ಮತ್ತು ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟಿರುವ 202 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ನಡೆಸಲಾಗುವ ತರಬೇತಿಗೆ ಪರಿಗಣಿಸಲು ಸೂಕ್ತ ಕ್ರಮವಹಿಸುವಂತೆ ನಿರ್ದೇಶಿಸಿದರು. ಈ ಕುರಿತು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗರವರು, ಗುರುತಿಸಲ್ಪಟ್ಟಿರುವ 202 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು.

ಸಭಾಧ್ಯಕ್ಷರು, ನಿರ್ಮಲೀಕರಣ ಸ್ವಚ್ಛತಾಗಾರರ ಪಟ್ಟಿಯನ್ನು ತಯಾರಿಸಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ಸಲ್ಲಿಸಲು ಆಯೋಗಕ್ಕೆ ಸೂಚಿಸಿದರು.

(ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ)

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಖಾಸಗಿ ನಿರ್ಮಲೀಕರಣ ಸ್ವಚ್ಛತಾಗಾರರಿಗೆ ತರಬೇತಿಯನ್ನು ನೀಡುವ ಸಂಬಂಧ ಪೂರ್ವಭಾವಿಯಾಗಿ ಸಿದ್ಧತೆ ಮಾಡಿಕೊಳ್ಳಲು ರಚಿಸಿಕೊಂಡಿರುವಂತಹ ಪಿ.ಪಿ.ಟಿ.ಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಈ ಕೆಳಕಂಡಂತೆ ವಿವರಿಸಿದರು.

- ಒಳಚರಂಡಿ ಸ್ವಚ್ಛಗೊಳಿಸಲು ಹೊಸ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಬಳಸಿ ಸುಲಭ ರೀತಿಯಲ್ಲಿ ಒಳಚರಂಡಿ ನಿರ್ವಹಣೆ ಮಾಡುವುದು.
- ಬೆಂಗಳೂರು ಜಲಮಂಡಲಿಯ ಸರ್.ಎಂ ವಿಶ್ವೇಶ್ವರಯ್ಯ ಮಳೆ ಸುಗ್ಗಿ ಕೇಂದ್ರ, ಜಯನಗರ, ಬೆಂಗಳೂರು ಇಲ್ಲಿ ಬೆಳಗ್ಗೆ ೧೦:೦೦ ರಿಂದ ಸಂಜೆ ೫:೦೦ ರವರೆಗೆ ೫ ದಿನಗಳ ತರಬೇತಿಯನ್ನು ಆಯೋಜಿಸುವುದು.
- Safe, Environmental & Safety Services, L&T ಮತ್ತು Kamavida ತರಬೇತುದಾರರ ಸಹಾಯದೊಂದಿಗೆ ತರಬೇತಿ ನೀಡುವುದು.
- ಖಾಸಗಿ ನಿರ್ಮಲೀಕರಣ/ಸ್ವಚ್ಛತಾ ಕಾರ್ಮಿಕರಿಗೆ ಯಂತ್ರಾಧಾರಿರ ನಿರ್ಮಲೀಕರಣ ಕೆಲಸ ನಿರ್ವಹಿಸಲು ತರಬೇತಿ ನೀಡುವುದು.
- ಸಫಾಯಿ ಕರ್ಮಚಾರಿಗಳಿಗೆ ಉತ್ತಮ ರೀತಿಯಲ್ಲಿ ವ್ಯವಸ್ಥಿತ ತರಬೇತಿಯನ್ನು ನೀಡಿ, ತಮ್ಮ ಕೆಲಸವನ್ನು ಸುರಕ್ಷತೆಯಿಂದ ನಿರ್ವಹಿಸುವಂತೆ ಬದಲಾವಣೆಯನ್ನು ತರುವುದು.
- ನಿರ್ಮಲೀಕರಣ ಕೆಲಸಗಾರರು ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಹಾಗೂ ಆಧುನಿಕ ತಂತ್ರಜ್ಞಾನ ಮತ್ತು ಯಂತ್ರಗಳ ಸಹಾಯದಿಂದ ಕಾರ್ಯನಿರ್ವಹಿಸಲು ಅವಕಾಶ ನೀಡಿ ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಹೆಚ್ಚಿಸುವುದು.
- ಮಾನ್ಯುಯಲ್ ಸ್ಕ್ಯಾವೆಂಜರ್ ನಿಷೇಧ ಕಾಯ್ದೆ-೨೦೧೩ ಬಗ್ಗೆ ಅರಿವು ಮೂಡಿಸುವುದು.
- ಒಳಚರಂಡಿ ಮಾರ್ಗವನ್ನು ಶುಚಿ ಮಾಡಬೇಕಾದ ಅವಶ್ಯಕತೆ/ ತ್ಯಾಜ್ಯ ನೀರಿನ ಒಳಚರಂಡಿ ಮಾರ್ಗದ ನಿರ್ವಹಣೆ ಮಾರ್ಗಸೂಚಿ ನೀಡುವುದು.
- ಸುರಕ್ಷಾ ಪರಿಕರಗಳ ಬಗ್ಗೆ ಹಾಗೂ ಅದರ ಉಪಯುಕ್ತತೆಯನ್ನು ವಿವರಿಸುವುದು.
- ಇಳಗುಂಡಿಯಲ್ಲಿ ಕೆಲಸ ಪ್ರಾರಂಭಕ್ಕೂ ಮುನ್ನ ರಕ್ಷಣಾ ಉಪಕರಣಗಳ ಅಳವಡಿಕೆ ಮತ್ತು ಸುರಕ್ಷತಾ ಕ್ರಮದ ಬಗ್ಗೆ ಜಲಮಂಡಳಿಯ ಒಂದು ಸೇವಾಠಾಣೆ ವ್ಯಾಪ್ತಿಯಲ್ಲಿ ಬರುವ ಜಾಗಕ್ಕೆ ತೆರಳಿ ಪ್ರಾಯೋಗಿಕ ತರಬೇತಿ ನೀಡುವುದು.
- ಕಿರು/ಬೃಹತ್ ತ್ಯಾಜ್ಯನೀರು ಸಂಸ್ಕರಣಾ ಘಟಕಗಳಲ್ಲಿನ ಸಂಸ್ಕರಣಾ ಕಾರ್ಯ ವಿಧಾನಗಳು, ವಿಷಕಾರಿ ಅನಿಲಗಳ ಬಗ್ಗೆ ಅರಿವು, ಸಂಸ್ಕರಣಾ ಘಟಕಗಳ ನಿರ್ವಹಣೆ ಮತ್ತು ಅನುಸರಿಸಬೇಕಾದ ಸುರಕ್ಷಾ ಕ್ರಮಗಳ ಬಗ್ಗೆ ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ವೀಕ್ಷಣೆ ಮಾಡಿ ಮಾಹಿತಿ ಪಡೆಯುವುದು.
- ನಾಲ್ಕು ದಿನಗಳ ತರಬೇತಿಯಿಂದ ಪಡೆದ ಅನುಭವಗಳ ಪರಸ್ಪರ ಅಭಿಪ್ರಾಯ ವಿನಿಮಯ ಹಾಗೂ ತರಬೇತಿ ಅನುಭವದ ಬಗ್ಗೆ ಅನಿಸಿಕೆ ಮತ್ತು ಪ್ರಮಾಣ ಪತ್ರ ವಿತರಣೆ ಮಾಡುವುದು.
- ಅಭ್ಯರ್ಥಿಗಳಿಗೆ ಬೆಳಗ್ಗೆ ಲಘು ಉಪಹಾರ, ಮಧ್ಯಾಹ್ನದ ಉಪಹಾರವನ್ನು ತರಬೇತಿ ಸ್ಥಳದಲ್ಲೇ ವ್ಯವಸ್ಥೆ ಮಾಡುವುದು.

* ಅಭ್ಯರ್ಥಿಗಳಿಗೆ ಯೋಜನಾ ಸ್ಥಳಕ್ಕೆ ಭೇಟಿ ನೀಡಲು ಸಾರಿಗೆ ವ್ಯವಸ್ಥೆ ಮಾಡುವುದು, ಅಭ್ಯರ್ಥಿಗಳಿಗೆ ನುರಿತ ತರಬೇತುದಾರರಿಂದ ತರಬೇತಿ ನೀಡುವುದು, ಅಭ್ಯರ್ಥಿಗಳಿಗೆ ವೇತನ, GENROBOTIC INNOVATIONS PRIVATE LTD (BANDICOOT) ಬಗ್ಗೆ ವಿವರಿಸುವುದು.

ಸಲಹೆಗಾರರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ನೋಡಲ್ ಏಜೆನ್ಸಿ, ಸಮಾಜ ಕಲ್ಯಾಣ ಇಲಾಖೆ ರವರು ನಿರ್ಮಲೀಕರಣ ಸ್ವಚ್ಛತಾಗಾರರಿಗೆ/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸಕ್ಕಿಂಗ್ ಮತ್ತು ಜೆಟ್ಟಿಂಗ್ ವಾಹನಗಳ ಮಾಲೀಕರನ್ನಾಗಿ ಮಾಡಲು ಪಾಲಿಕೆ/ನಗರ ಸ್ಥಳೀಯ ಸಂಸ್ಥೆಗಳು, ಎನ್.ಜಿ.ಓ. ಮತ್ತು ಖಾಸಗಿ ವಸತಿ ಸಮುಚ್ಛಯಗಳ ಜೊತೆ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸಲು ಟ್ರೈ ಪಾರ್ಟಿ ಒಡಂಬಡಿಕೆ ಮೂಲಕ ನಿರಂತರ ಉದ್ಯೋಗ ಮತ್ತು ಆದಾಯ ಗಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಶೇ.4 ರಂತೆ ಬಡ್ಡಿ ಸಹಾಯಧನದ ಸಾಲ ಸೌಲಭ್ಯವಿರುವುದಾಗಿ ತಿಳಿಯಪಡಿಸಿದರು.

ಸಭಾಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮುಖಾಂತರ ತರಬೇತಿ ಹೊಂದಿ ಸರ್ಟಿಫಿಕೇಟ್ ಪಡೆದಿರುವಂತಹ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸಕ್ಕಿಂಗ್ ಮತ್ತು ಜೆಟ್ಟಿಂಗ್ ವಾಹನಗಳ ಮಾಲೀಕರನ್ನಾಗಿ ಮಾಡಲು ಸೂಕ್ತ ಯೋಜನೆಯನ್ನು ರೂಪಿಸಿಕೊಂಡು ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿದರು. ಅಧ್ಯಕ್ಷರು, ಬೆಂ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ ರವರು ತರಬೇತಿ ನೀಡುವುದೂ ಸೇರಿದಂತೆ, ಈ ಯೋಜನೆಗೆ ಅಗತ್ಯವಿರುವ ಪೂರ್ಣ ಸಹಾಯ ಹಾಗೂ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

**(ಕ್ರಮ: ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ)**

ಪುನ:, <u>ಹದಿನೈದು</u> ದಿನಗಳ ನಂತರ ಮತ್ತೆ ಸಭೆ ಸೇರಲು ತೀರ್ಮಾನಿಸಿ, ಕಾರ್ಯದರ್ಶಿಗಳು, ಕ.ರಾ.ಸ.ಕ.ಆಯೋಗ ರವರ ವಂದನೆಗಳೊಡನೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದಿತಾ ಶ.

**(ವಂದಿತಾ ಶರ್ಮ)**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ**
**ಅಭಿವೃದ್ಧಿ ಆಯುಕ್ತರು.**

<u>ಪ್ರತಿ, ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
3. ಸಲಹೆಗಾರರು, ಎಸ್.ಸಿ.ಎಸ್.ಪಿ & ಟಿ.ಎಸ್.ಪಿ ನೋಡಲ್ ಏಜೆನ್ಸಿ, ಸಮಾಜ ಕಲ್ಯಾಣ ಇಲಾಖೆ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.